ತಮ್ಮ ಮುಖಾಂತರ ವಿಶೇಷವಾಗಿ ಕೇಳುವುದೇನೆಂದರೆ ಆ Superintending Engineer ಮೇಲೆ ಇಲಾಖೆ ಏನು ಕ್ರಮವನ್ನು ಕೈಗೊಂಡಿದೆ? ಈಗಾಗಲೇ ಇಲಾಖೆಯ ನೌಕರರು ಈ ಕುರಿತು ಬೆಳಗಾವಿಯ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಕೊಟ್ಟಿದ್ದಾರೆಂದು ಈ ವರದಿಯಲ್ಲಿದೆ. ಅದರ ಆಧಾರದ ಮೇಲೆ ಇಲಾಖೆ ಕೈಗೊಂಡ ಕ್ರಮವೇನು? 15 ದಿವಸಗಳ ಕಾಲ strike ಮಾಡಿದರೂ ಸಹಾ 'ಯಾವುದೇ ಕ್ರಮ ಕೈಗೊಳ್ಳವುದಿಲ್ಲ, ಯಾರನ್ನೂ transfer ಮಾಡುವುದಿಲ್ಲ' ಎಂದು ಬಹಿರಂಗ ಹೇಳಿಕೆಗಳನ್ನು ಕೊಟ್ಟಿದ್ದಾರೆಂದು ಇದರಲ್ಲಿ ದಾಖಲಾಗಿದೆ. ದಯಮಾಡಿ ಈ ಒಂದು ಆರೋಪವನ್ನು ತೀವ್ರವಾಗಿ ಪರಿಗಣಿಸಿ, ಸಂಬಂಧಪಟ್ಟಂತಹ ಅಧಿಕಾರಿ ಮೇಲೆ ಕಾನೂನಿನ ರೀತಿ ಕ್ರಮವನ್ನು ಜರುಗಿಸಿ, ತಕ್ಷಣ ಅವನನ್ನು ಸಸ್ಪೆಂಡ್ ಮಾಡಿ, ತನಿಖೆಗೆ ಆದೇಶಿಸಬೇಕೆಂದು ಸಂಬಂಧಪಟ್ಟ ಸಚಿವರಲ್ಲಿ ನಾನು ತಮ್ಮ ಮುಖಾಂತರ ಮನವಿಯನ್ನು ಮಾಡುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ನರೇಂದ್ರಸ್ವಾಮಿಯವರು ಶೂನ್ಯ ವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಅವರು ಪತ್ರಿಕಾ ವರದಿಯೊಂದನ್ನು ಆಧಾರವಾಗಿಟ್ಟುಕೊಂಡು ಇದನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಆದರೆ ಈ ಶೂನ್ಯ ವೇಳೆ ಪ್ರಸ್ತಾಪವನ್ನು ಕೊಡುವಾಗ, ಆ ವರದಿಯನ್ನು ಅದಕ್ಕೆ ಅವರು ಲಗತ್ತಿಸಿಲ್ಲ. ನಾನು ಆ ಮಾಹಿತಿಯನ್ನು ತರಿಸಿಕೊಂಡು ಅದನ್ನು ಪರಿಶೀಲಿಸಿ, ಏನು ಕ್ರಮ ತೆಗೆದುಕೊಳ್ಳುತ್ತೇವೆಂದು ಸನ್ಮಾನ್ಯ ಸದಸ್ಯರಿಗೆ ತಿಳಿಸುತ್ತೇವೆ.

2. ವಿಷಯ: ಹೊಸ ತಾಲ್ಲೂಕುಗಳ ರಚನೆ ಬಗ್ಗೆ.

ಶ್ರೀ ಸಿದ್ದು ಸವದಿ [ತೇರದಾಳ]:– ಮಾನ್ಯ ಅಧ್ಯಕ್ಷರೆ, ಈ ಹಿಂದೆ ನಮ್ಮ ಸರ್ಕಾರ ಈ ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚನೆ ಮಾಡಲಿಕ್ಕೆ ಪ್ರಯತ್ನ ಪಟ್ಟಿತ್ತು. ಆದರೆ ಜನಗಣತಿ ಬಂದಿದ್ದರಿಂದ, ಅದನ್ನು ತಾತ್ಪೂರ್ತಿಕವಾಗಿ ತಡೆಹಿಡಿಯಲಾಗಿತ್ತು. ಈಗ ಸೆನ್ಸಸ್ ಮುಗಿದು ಹೋಗಿದ್ದರಿಂದ ಹೊಸ ತಾಲ್ಲೂಕುಗಳ ರಚನೆಗೆ ಚಾಲನೆ ಕೊಡಬೇಕು. ಈಗಾಗಲೇ ಎಂ.ಪಿ.ಪ್ರಕಾಶ್ ಆಯೋಗ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಆಗಿದೆ. ಆಡಳಿತದ ಹಿತದೃಷ್ಟಿಯಿಂದ ಮತ್ತು ನಮ್ಮ ಕ್ಷೇತ್ರಗಳ ಅಭಿವೃದ್ಧಿ ದೃಷ್ಟಿಯಿಂದ ಹೊಸ ತಾಲ್ಲೂಕುಗಳ ರಚನೆ ಬಹಳಷ್ಟು ಅತ್ಯವಶ್ಯವಾಗಿರುವುದರಿಂದ ತಕ್ಷಣ ಹೊಸ ತಾಲ್ಲೂಕುಗಳ ರಚನೆಯನ್ನು ಸರ್ಕಾರ ಮಾಡಿ ಆದೇಶ ಮಾಡಬೇಕೆಂದು ತಮ್ಮ

ಮುಖಾಂತರ ಕೇಳುತ್ತೇನೆ. ಕಾರಣವೇನೆಂದರೆ ಅನೇಕ ರೀತಿಯಿಂದ 2–3 ತಾಲ್ಲೂಕುಗಳನ್ನು ಅಥವಾ ಎರಡು ಮೂರು ಕ್ಷೇತ್ರಗಳನ್ನು ಹೊಂದಿಕೊಂಡಿರತಕ್ಕಂತಹ ಅಧಿಕಾರಿಗಳಿಗೆ ಬಹಳಷ್ಟು ಸಮಸ್ಯೆ ಆಗಿದೆ. ಯಾವುದೇ ವಿಶೇಷ ಅನುದಾನ ಬಂದರೂ ನಮ್ಮ ನಮ್ಮಲ್ಲಿ ಒಂದು ತಾಲ್ಲೂಕಿನಲ್ಲಿರತಕ್ಕಂತಹ ಇಬ್ಬರು ಮೂವರು ಶಾಸಕರು ಒಂದೇ ಪಕ್ಷದವರಿದ್ದರೂ ಸಹಿತ ಅನೇಕ ಭಿನ್ನಭಿಪ್ರಾಯಗಳು ಬರುವಂತಹ ಸಮಸ್ಯೆ ಇರುವುದರಿಂದ ವಿವಿಧ ಸಂಘ ಸಂಸ್ಥೆಗಳ ಚುನಾವಣೆ ಎದುರಿಸಬೇಕಾದರೆ ನಮ್ಮ ಶಾಸಕರ ಜೊತೆ ಸಂಘರ್ಷಕ್ಕೆ ಇಳಿಯಬೇಕಾಗಿರುವುರಿಂದ ವಿಶೇಷವಾಗಿ ಬಡ ಜನರಿಗೆ ಇರತಕ್ಕಂತಹ ಸೌಲಭ್ಯಗಳನ್ನು ಮುಟ್ಟಿಸಲು ಸಹಿತ ಅಧಿಕಾರಿಗಳು ನಾವು ಕೇಳಿದಾಗ ಇನ್ನೊಬ್ಬರು ಶಾಸಕರು ಕರೆದಿದ್ದರು ಅಲ್ಲಿಗೆ ಹೋಗಿದ್ದೆವೆಂದು ಹೇಳುತ್ತಾರೆ. ಬಹಳಷ್ಟು ಆಡಳಿತಾತ್ಮಕ ತೊಂದರೆಗಳಾಗಿವೆ. ಆದಷ್ಟು ಬೇಗ ಹೊಸ ತಾಲ್ಲೂಕುಗಳ ರಚನೆ ಮಾಡಿ ಆದೇಶ ಮಾಡಬೇಕೆಂಬ ಒತ್ತಾಯವನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಮಾಡಬಯಸುತ್ತೇನೆ. ಹೊಸದಾಗಿ ಚುನಾವಣೆ ಆಗುವುದಕ್ಕೆ ಇನ್ನು ಎರಡು ವರ್ಷಗಳಿವೆ. ಆ ಚುನಾವಣೆ ಸಮೀಪ ಮಾಡಿ ಜನಾಭಿಪ್ರಾಯ ವಿರೋಧ ಬರುವುದಕ್ಕಿಂತ ಪೂರ್ವದಲ್ಲಿ ಭಿನ್ನಾಭಿಪ್ರಾಯ ಕಡಿಮೆ ಇರುವಂತಹ ಕಡೆ ಮೊದಲನೇ ಹಂತದಲ್ಲಿ ಪ್ರಾಯೋಗಿಕವಾಗಿ ಮಾಡಬೇಕು. ನಮ್ಮ ಕ್ಷೇತ್ರದಲ್ಲಿ ಭಿನ್ನಾಭಿಪ್ರಾಯ ಬಹಳ ಕಡಿಮೆ ಇದ್ದಲ್ಲಿಯೂ ಸಹಿತ ನಮ್ಮ ತೇರದಾಳ ಮತ ಕ್ಷೇತ್ರದಲ್ಲಿ ಎಂ.ಪಿ. ಪ್ರಕಾಶ್ ಆಯೋಗ ಯಾವ ತಾಲ್ಲೂಕುಗಳು ಮಾಡಬೇಕೆಂದು ವರದಿ ಕೊಟ್ಟಿದೆ. ಆ ಪ್ರಕಾರ ಇನ್ನೊಮ್ಮೆ ಪರಿಶೀಲನೆ ಮಾಡಿ ಅದಕ್ಕೆ ಕ್ಯಾಬಿನೆಟ್ ಸಬ್ ಕಮಿಟಿ ಮಾಡುತ್ತೇವೆ ಎನ್ನುವಂತಹ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಅದನ್ನು ತಕ್ಷಣ ರಚನೆ ಮಾಡಿ ಅದಕ್ಕೆ ಚಾಲನೆ ಕೊಟ್ಟು, ಬೇಗನೆ ಹೊಸ ತಾಲ್ಲೂಕುಗಳನ್ನು ರಚನೆ ಮಾಡಿ ಆ ಭಾಗದ ಅಭಿವೃದ್ಧಿ ಮಾಡಬೇಕೆಂಬ ವಿನಂತಿಯನ್ನು ತಮ್ಮ ಮೂಲಕ ಈ ಸರ್ಕಾರಕ್ಕೆ ಮಾಡಬಯಸುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕ ಸ್ನೇಹಿತರಾದ ಸಿದ್ದು ಸವದಿಯವರು ಬಹಳ ಮಹತ್ತರವಾದ ವಿಚಾರವನ್ನು ಶೂನ್ಯ ವೇಳೆಯಲ್ಲಿ ಇವತ್ತು ಪ್ರಸ್ತಾಪ ಮಾಡಿದ್ದಾರೆ. ಇದು ತಾಲ್ಲೂಕುಗಳ ಪುನರ್ ರಚನೆ ವಿಚಾರ. ಈಗಾಗಲೇ ಎಂ.ಪಿ. ಪ್ರಕಾಶ್‌ರವರ ಆಯೋಗ ನಾವು ಮಾಡಿದ್ದೆವು ಅವರು ಒಂದು ವರದಿ ಸಲ್ಲಿಸಿದ್ದಾರೆ. ಜನಗಣತಿಯ ಪೂರ್ಣ ವರದಿ ಬಂದ ಮೇಲೆ official figures ಬಂದ ಮೇಲೆ ಇದರ ಬಗ್ಗೆ ನಾವು ಪುನರ್ ವಿಚಾರಣೆ

ಮಾಡುತ್ತೇವೆ. ಆಗ ಖಂಡಿತ ಏನು ಸಿದ್ದು ಸವದಿಯವರು ಪ್ರಸ್ತಾಪ ಮಾಡಿದ್ದಾರೆ ಅದನ್ನು ನಾವು ಗಮನಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಶ್ರೀಕಾಂತ್ ಕುಲಕರ್ಣಿ(ಜಮಖಂಡಿ):- ಮಾನ್ಯ ಅಧ್ಯಕ್ಷರೆ, ಬರೀ ತಾಲ್ಲೂಕುಗಳೂ ಮಾತ್ರವಲ್ಲ ಹೊಸ ಜಿಲ್ಲೆಗಳನ್ನು ಮಾಡುವುದರ ಬಗ್ಗೆ ಕೂಡ ಚರ್ಚೆ ಆಗಬೇಕಾಗಿದೆ. ನಮ್ಮೆಲ್ಲರ ಅಭಿಪ್ರಾಯದ ಪ್ರಕಾರ ಜಮಖಂಡಿ ಒಂದು ಹೊಸ ಜಿಲ್ಲೆ ಮಾಡಲಿಕ್ಕೆ ಬಹಳಷ್ಟು ಯೋಗ್ಯ ಇದೆ. ಮುಧೋಳ್, ಬೀಳಗಿ, ಜಮಖಂಡಿ, ಅಥಣಿ, ಎಲ್ಲಾ ಸೇರಿಸಿ ಒಂದು ಹೊಸ ಜಿಲ್ಲೆ ಮಾಡಿದರೆ, ಅಭಿವೃದ್ಧಿ ದೃಷ್ಟಿಯಿಂದ ಇನ್ನಷ್ಟು ಅನುಕೂಲವಾಗುತ್ತದೆ ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಲಕ್ಷ್ಮೀನಾರಾಯಣ(ಬೈಂದೂರು):- ಮಾನ್ಯ ಅಧ್ಯಕ್ಷರೆ, ತಾಲ್ಲೂಕುಗಳನ್ನು ಮಾಡುವಾಗ ಬಹಳ ಹಿಂದುಳಿದಿರುವಂತಹ ಮೈಸೂರನ್ನು ಕೂಡ ಪರಿಗಣಿಸಬೇಕೆಂದು ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

3. ವಿತ್ತೀಯ ಕಾರ್ಯಕಲಾಪ

ಅ) 2011–12ನೇ ಸಾಲಿನ ಪೂರಕ ಅಂದಾಜು(ಒಂದನೇ ಕಂತು) ಮಂಡನೆ ಹಾಗೂ ಚರ್ಚೆ.

ಅಧ್ಯಕ್ಷರು:- ಈಗ ಸನ್ಮಾನ್ಯ ಮುಖ್ಯಮಂತ್ರಿಗಳೂ 2011–12ನೇ ಸಾಲಿನ ಪೂರಕ ಅಂದಾಜುಗಳನ್ನು ಮಂಡಿಸುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, 2011–12ನೇ ಸಾಲಿನ ಪೂರಕ ಅಂದಾಜುಗಳನ್ನು ಮಂಡಿಸುತ್ತೇನೆ. ಹಾಗೂ ಇದನ್ನು ಮತಕ್ಕೆ ಹಾಕಬೇಕೆಂದು ಕೋರುತ್ತೇನೆ. ಪೂರಕ ಅಂದಾಜುಗಳ ಗಾತ್ರ 1965.28 ಕೋಟಿ ರೂ. ಇದರಲ್ಲಿ ಪ್ರಮುಖ ಅಂಶಗಳು ಏನೆಂದರೆ, ಕೆರೆ ಪುನರುಜ್ಜೀವನ ಯೋಜನೆ 840 ಕೋಟಿ ರೂ. ರಸ್ತೆ ಜಾಲ ಅಭಿವೃದ್ಧಿ ಯೋಜನೆ 800 ಕೋಟಿ supplementary ಅಂದಾಜುಗಳ ಮೇಲೆನ ವೆಚ್ಚದ ಉಳಿತಾಯದ ಬಾಬ್ತು 840 ಕೋಟಿ ರೂ. ಸಾಮಾನ್ಯ ತೆರಿಗೆ ಮತ್ತು ತೆರಿಗೆಯೇತರ ವಸೂಲಾತಿಗಾಗಿ 1068.04 ಕೋಟಿ ರೂ. ಕೇಂದ್ರ ಸರ್ಕಾರದ ನೆರವಾದ 41.37 ಕೋಟಿ ರೂ.ಗಳು ಹಾಗೂ ಲೆಕ್ಕ ಹೊಂದಾಣಿಕೆಗೆ 15.94 ಕೋಟಿ ರೂ. ಗಳಿಂದ ಭರಿಸಲಾಗುವುದು. ಇದಕ್ಕೆ ಮಂಜೂರಾತಿ ನೀಡಬೇಕೆಂದು ಸದನವನ್ನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಮಂಡಿಸಲಾಯಿತು.